## ಪದ್ಯ

# ಭಾಗ್ಯದ ಬಳೆಗಾರ

**ಜನಪದ ಗೀತೆ**

**ಮೌಲ್ಯ– ಸ್ತ್ರೀಯರ ಬಗ್ಗೆ ಗೌರವ ಮನೋಭಾವನೆ**

***ಪದಗಳ ಅರ್ಥ**

1. ತವರು – ತಾಯಿಯ ಮನೆ
2. ಬಾಳೆ – ಬಾಳೆಯ ಗಿಡ
3. ಸೀಬೆ – ಪೇರಳೆ
4. ಮುತ್ತೈದೆ – ಮದುವೆಯಾದ ಹೆಣ್ಣು
5. ಕಂಚು – ಒಂದು ಲೋಹ
6. ಮಿಂಚಾಡು – ಹೊಳೆಯುವುದು
7. ಗಿಣಿ – ಗಿಳಿ
8. ಆಲೆ – ಕಬ್ಬಿನ ರಸ ತೆಗೆಯುವ ಯಂತ್ರ, ಗಾಣ
9. ಸಾರಂಗ – ಮೈಮೇಲೆ ಚುಕ್ಕಿಗಳಿರುವ ಜಿಂಕೆ
10. ಪಗಡೆ – ಒಂದು ರೀತಿಯ ಆಟ
11. ನಟ್ಟ ನಡುವೆ – ಮಧ್ಯ
12. ಹಟ್ಟಿ – ಮನೆ
13. ಹಡೆದವ್ವ – ಹೆತ್ತ ತಾಯಿ
14. ಕೊಂಡ್ಹೋಗು – ತೆಗೆದುಕೊಂಡು ಹೋಗು

**ಪ್ರಶ್ನೆ ಅ ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1.ಬಳೆಗಾರ ಎಲ್ಲಿ ಹೋಗಿ ಬರಬೇಕೆಂದು ಹೆಣ್ಣು ಹೇಳುತ್ತಾಳೆ?**

**ಉತ್ತರ:** ಬಳೆಗಾರನು ತನ್ನ ತವರು ಮನೆಗೆ ಹೋಗಿ ಬರಬೇಕೆಂದು ಹೆಣ್ಣು ಹೇಳುತ್ತಾಳೆ.

**2.ತಾಯಿಯ ಮನೆ ಯಾವ ರೀತಿ ಇದೆ?**

**ಉತ್ತರ:** ತಾಯಿಯ ಮನೆಯು– ಹಂಚಿನ ಮನೆ ಹಾಗೂ ಕಂಚಿನ ಕದದಿಂದ ಕೂಡಿದೆ. ಹಾಗು ಮನೆಯ ಮುಂದೆ ಎರಡು ಗಿಳಿಗಳಿವೆ. ಈ ರೀತಿ ತಾಯಿಯ ಮನೆಯಿದೆ.

**3.ಚಪ್ಪರದ ನಡುವೆ ತಾಯಿ ಯಾವ ಆಟ ಆಡುತ್ತಾಳೆ?**

**ಉತ್ತರ:** ಚಪ್ಪರದ ನಡುವೆ ತಾಯಿಯು ಪಗಡೆಯ ಆಟ ಆಡುತ್ತಾಳೆ.

**4.ಹಡೆದವ್ವನಿಗೆ ಯಾವ ಬಣ್ಣದ ಬಳೆ ಎಂದರೆ ಆಸೆ?**

**ಉತ್ತರ:** ಹಡೆದವ್ವನಿಗೆ ಅಚ್ಚಕೆಂಪು ಮತ್ತು ಹಸಿರು ಗೀರಿನ ಬಳೆ ಎಂದರೆ ಆಸೆ.

**ಪ್ರಶ್ನೆ ಆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1.ತವರು ಮನೆಗೆ ಹೋಗಲು ಗುರುತುಗಳೇನು?**

**ಉತ್ತರ:** ತವರು ಮನೆಗೆ ಹೋಗುವ ದಾರಿಯಲ್ಲಿ ಬಲಗಡೆ ಬಾಳೆತೋಟ, ಎಡಗಡೆ ಸೀಬೆತೋಟ,ಇದೆ ಇವೆರಡರ ನಡುವೆ ದಾರಿ ಕ್ರಮಿಸಿದರೆ ಮನೆಯ ಮುಂದೆ ಆಲೆಮನೆ ಇದೆ,ಗಾಣ ತಿರುಗುತ್ತಿರುತ್ತದೆ. ಈ ರೀತಿಯಾಗಿ ತವರು ಮನೆಗೆ ಹೋಗಲು ಗುರುತುಗಳಿವೆ.

**2.ತವರ ಮನೆ ನೋಡಲು ಹೇಗಿದೆ?**

**ಉತ್ತರ:** ಹೆಣ್ಣು ಮಗಳ ತವರು ಮನೆ ನೋಡಲು ತುಂಬಾ ಸೊಗಸಾಗಿದೆ. ಇದು ಹಂಚಿನ ಮನೆಯಾಗಿದೆ, ಕಂಚಿನ ಕದದಿಂದ ಕೊಡಿದೆ, ಮನೆಯ ಮುಂದೆ ಮಿಂಚಾಡುವ ಎರಡು ಗಿಳಿಗಳಿವೆ, ಮನೆಯ ಮುಂದೆ ಮುತ್ತಿನ ಚಪ್ಪರ ಹಾಕಿದೆ ಆ ಚಪ್ಪರದ ಕೆಳಗೆ ಹೆಣ್ಣು ಮಗಳ ತಾಯಿಯು ಪಗಡೆ ಆಡುತ್ತಾ ಕುಳಿತಿರುವಳು.

**ಪ್ರಶ್ನೆ ಉ ಕೆಳಗಿನ ವಾಕ್ಯಗಳಂತೆ ಅರ್ಥಕೊಡುವ ಸಾಲುಗಳನ್ನು ಪದ್ಯದಲ್ಲಿ ಗುರುತಿಸಿ.**

1.ನಿನ್ನ ತವರೂರು ನನಗೇನು ಗೊತ್ತು?

* **ನಿನ್ನ ತವರೂರು ನಾನೇನು ಬಲ್ಲೆನು.**

2.ಅಲ್ಲಿದೆ ನನ್ನ ತವರೂರು.

* **ಅಲ್ಲಿಹುದೇ ನನ್ನ ತವರೂರು.**

3.ನನ್ನ ತವರು ಮನೆಯ ಮಾಡು ಹಂಚಿನದು; ನನ್ನ ತವರು ಮನೆಯ ಬಾಗಿಲು ಕಂಚಿನದು

*** ಹಂಚಿನ ಮನೆ ಕಾಣೊ ಕಂಚಿನ ಕದ ಕಾಣೊ.**

4. ಎಲ್ಲೈ ಬಳೆಗಾರನೇ, ನವಿಲು ಸಾರಂಗ ಅಲ್ಲಿ ಕುಣಿಯುತ್ತವೆ.

*** ನವಿಲು ಸಾರಂಗ ನಲಿತಾವೆ ಬಳೆಗಾರ.**

5. ಬಳೆಗಾರ! ನನ್ನ ತಾಯಿ ಅವಳೇ.

*** ಅವಳೇ ಕಾಣೊ ಎನ್ನ ಹಡೆದವ್ವಾ**

6. ಬಳೆಗಳನ್ನು ನನ್ನ ತವರು ಮನೆಗೆ ತೆಗೆದುಕೊಂಡು ಹೋಗು.

*** ಕೊಂಡ್ಹೋಗೊ ಎನ್ನ ತವರೀಗೆ.**

7. ನನ್ನ ತಾಯಿಗೆ ಅಚ್ಚ ಕೆಂಪಿನ ಹಸಿರು ಗೀರಿನ ಬಳೆ ಎಂದರೆ ತುಂಬಾ ಇಷ್ಟ.

*** ಅಚ್ಚ ಕೆಂಪಿನ ಬಳೆ ಹಸಿರು ಗೀರಿನ ಬಳೆ ಎನ್ನ ಹಡೆದವ್ವಗೆ ಬಲು ಆಸೆ ಬಳೆಗಾರ.**